26ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ಮೆಯೋಹಾಲ್ ಬೆಂಗಳೂರು.

ಶ್ರೀ. ಡಿ.ಎಸ್. ವಿಜಯ್ ಕುಮಾರ್, ಬಿ.ಎಸ್.ಸಿ.ಎಲ್.ಎಲ್.ಬಿ.,
26ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,

ದಿನಾಂಕಃ 22ನೇ ಅಕ್ಟೋಬರ್ 2020.

ಕ್ರಿಮಿನಲ್.ಮಿಸ್.ನಂ. 25780/2020

ಆರೋಪಿತರುಃ

1) ವಿಶ್ವ @ ಅನು @ ವಾಣಿ ,
ತಂದೆಃ ಲೇಟ್ ಶ್ರೀನಿವಾಸ ,
ವಯಸ್ಸು ಃ ಸುಮಾರು 29 ವರ್ಷ,
ವಾಸಃ ನಂ.12, ಹೊರಮಾವು,
ಅಗರ ಮುಖ್ಯರಸ್ತೆ , ವಡ್ಡರಪಾಳ್ಯ ,
ಕಲ್ಯಾಣನಗರ ಅಂಚೆ, ಬೆಂಗಳೂರು-560 043.
(ಆರೋಪಿ 1)

2) ಎಸ್.ಚಿನ್ನು @ ಕಾವ್ಯ ,
ತಂದೆಃ ಸುರೇಶ್,
ವಯಸ್ಸು ಃ ಸುಮಾರು 23 ವರ್ಷ,
ವಾಸಃ ನಂ.12, ಹೊರಮಾವು,
ಅಗರ ಮುಖ್ಯರಸ್ತೆ , ವಡ್ಡರಪಾಳ್ಯ ,
ಕಲ್ಯಾಣನಗರ ಅಂಚೆ, ಬೆಂಗಳೂರು-560 043.
(ಆರೋಪಿ 2)

3) ಸುನೀಲ್‌ಗೌಡ @ ಸುಷ್ಮ,
ತಂದೆಃ ಜಯಚಂದ್ರ ,
ವಯಸ್ಸು ಃ ಸುಮಾರು 21 ವರ್ಷ,
ವಾಸಃ ನಂ.12, ಹೊರಮಾವು,
ಅಗರ ಮುಖ್ಯರಸ್ತೆ , ವಡ್ಡರಪಾಳ್ಯ ,
ಕಲ್ಯಾಣನಗರ ಅಂಚೆ, ಬೆಂಗಳೂರು-560 043.
(ಆರೋಪಿ 3)

(ಶ್ರೀ. ರಂಗನಾಥ್, ವಕೀಲರು ಅರ್ಜಿದಾರರ ಪರವಾಗಿ)

- ವಿರುದ್ಧ -

ದೂರುದಾರಃ ಹೆಣ್ಣೂರು ಪೊಲೀಸ್ ಠಾಣೆ,
ಬೆಂಗಳೂರು.

(ಪ್ರತಿವಾದಿಯ ವಕೀಲರು- ಸರ್ಕಾರಿ ಅಭಿಯೋಜಕರು)

ಆದೇಶ

ಅರ್ಜಿದಾರರು/ 1 ರಿಂದ 3ನೇ ಆರೋಪಿಗಳು ಈ ಅರ್ಜಿಯನ್ನು ದಂಡಪ್ರಕ್ರಿಯಾ ಸಂಹಿತೆಯ ಕಲಂ 439 ರ ಅಡಿಯಲ್ಲಿ ಎದುರುದಾರರ ಪೊಲೀಸ್ ಠಾಣೆಯಲ್ಲಿ ನೊಂದಾವಣಿಯಾಗಿರುವ ಮೊಕದ್ದಮೆ ಸಂಖ್ಯೆ ಃ 229/2020 ರಲ್ಲಿ ಭಾ.ದ.ಸಂ. ಕಲಂ 302 ರ ಅಪರಾದಕ್ಕೆ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದಾರೆ.

2. ಅರ್ಜಿದಾರರ ಈ ಅರ್ಜಿಯ ಸಾರಾಂಶ ಈ ಕೆಳಕಂಡಂತೆ ಇದೆಃ-

ಪ್ರಥಮ ಮಾಹಿತಿದಾರ ವೆಂಕಟೇಶ್, ತನ್ನ ದೂರಿನಲ್ಲಿ ದಿನಾಂಕಃ 25.09.2020 ರಂದು ಬೆಳಗ್ಗೆ ಸುಮಾರು 5-45 ಗಂಟೆಗೆ ಪಿರ್ಯಾದುದಾರರು ಕೆಲಸ ಮಾಡಿಸಲು ಹೊಸ ಕಟ್ಟಡದ ಹತ್ತಿರ ಬಂದಾಗ ಈ ಕಟ್ಟಡದ ಎದುರು ರಸ್ತೆಯ ಆ ಕಡೆ ಪುಟ್‌ಬಾತ್ ಮೇಲೆ ಅಪರಿಚಿತ ವ್ಯಕ್ತಿ ಅಂಗಾತವಾಗಿ ಮಲಗಿದ್ದು , ಹತ್ತಿರ ಹೋಗಿ ನೋಡಲಾಗಿ ಆತನ ಎಡಕಣ್ಣಿನ ಸುತ್ತ ಕೆಂಪಾಗಿದ್ದು , ಮೂಗು, ಬಾಯಿಯಲ್ಲಿ ರಕ್ತ ಬಂದು ಹೆಪ್ಪು ಕಟ್ಟಿರುವ ಹಾಗೇ ಕಂಡುಬಂದಿರುತ್ತದೆ. ಕೈಗಳು ಮತ್ತು ಕಾಲುಗಳಿಗೆ ಹಾಗೂ ತಲೆಯ ಮೇಲೆ ರಕ್ತಗಾಯಗಳು ಆಗಿರುವುದು ಕಂಡು ಬಂದಿರುತ್ತದೆ. ಈತನು ಮೃತಪಟ್ಟಿರುವ ಹಾಗೆ ಕಂಡುಬಂದಿದ್ದು , ಕೂಡಲೇ ಪಿರ್ಯಾದುದಾರರು ಕಂಟ್ರೋಲ್ ರೂಂ ನಂ.100 ಗೆ ಕರೆಮಾಡಿ ವಿಚಾರವನ್ನು ತಿಳಿಸಿದ್ದು , ನಂತರ ಸ್ವಲ್ಪ ಹೊತ್ತಿನಲ್ಲಿ ವಡ್ಡರಪಾಳ್ಯದ ಒಬ್ಬ ವ್ಯಕ್ತಿ ಬಂದು ಮೃತ ವ್ಯಕ್ತಿಯು ವಡ್ಡರಪಾಳ್ಯದ ಎಸ್.ಎಲ್.ವಿ ಬಾರ್ ಹತ್ತಿರ ಇರುವ ಕಣ್ಣನ್ ಮಗ ಶೇಖರ್ ಎಂಬುದಾಗಿ ತಿಳಿಸಿ

ಹೊರಟು ಹೋಗಿದ್ದು , ನಂತರ ಹೆಣ್ಣೂರು ಪೊಲೀಸರು ಸ್ಥಳಕ್ಕೆ ಬಂದು ಶವವವನ್ನು ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕೊಂಡೊಯ್ದಿರುತ್ತಾರೆ. ಅದರ ಆಧಾರದ ಮೇಲೆ ಪೊಲೀಸಿನವರು ಮೇಲ್ಕಂಡ ಮೊಕದ್ದಮೆಯನ್ನು ದಾಖಲು ಮಾಡಿರುತ್ತಾರೆ. ಆದರೆ ಅರ್ಜಿದಾರರು ಯಾವುದೇ ಅಪರಾಧವನ್ನು ಎಸಗಿರುವುದಿಲ್ಲ , ಅವರು ಯಾವುದೇ ಷರತ್ತು ಪಾಲನೇ ಮಾಡಲು ತಯಾರಿದ್ದಾರೆ ಹಾಗೂ ಜಾಮೀನು ಒದಗಿಸಲು ತಯಾರಿದ್ದಾರೆಂದು ಜಾಮೀನು ಕೋರಿರುತ್ತಾರೆ.

3. ಅಭಿಯೋಜನೆಯು ತಕರಾರು ಸಲ್ಲಿಸಿ ಪಿರ್ಯಾದಿನ ಅಂಶಗಳನ್ನು ಪುನರುಚ್ಚರಿಸಿ ಅರ್ಜಿದಾರರಿಗೆ ಜಾಮೀನು ಮಂಜೂರು ಮಾಡಿದರೆ ಅವರು ತಲೆ ಮರೆಸಿಕೊಳ್ಳುವ ಸಾಧ್ಯತೆಯಿದೆ. ವಿಚಾರಣೆಗೆ ಹಾಜರಾಗುವುದಿಲ್ಲ ಅವರು ಪಿರ್ಯಾದುದಾರರಿಗೆ ಹಾಗೂ ಸಾಕ್ಷಿದಾರರಿಗೆ ಬೆದರಿಕೆ ಹಾಕುವ ಸಾಧ್ಯತೆಯಿದೆ. ಅದ್ದರಿಂದ ಜಾಮೀನು ಅರ್ಜಿ ವಜಾ ಮಾಡಬೇಕೆಂದು ಕೋರಿದೆ.

4. ವಾದವನ್ನು ಕೇಳಲಾಗಿದೆ.

5. ಈ ಮೇಲ್ಕಂಡ ಸನ್ನಿವೇಶಗಳಲ್ಲಿ ಈ ಕೇಳಕಂಡ ಅಂಶಗಳನ್ನು ನಿರ್ಣಯಿಸಲಾಗಿದೆಃ-

<u>ಅಂಶಗಳು</u>

ಅಂಶ 1ಃ ಅರ್ಜಿದಾರರು /ಆರೋಪಿ 1 ರಿಂದ 3 ಕೋರಿರುವಂತೆ ಜಾಮೀನು ಪಡೆಯಲು ಅರ್ಹರೆ ?

ಅಂಶ 2ಃ ಯಾವ ಆದೇಶ ?

6. ಮೇಲ್ಕಂಡ ಅಂಶಗಳನ್ನು ಈ ಮುಂದಿನಂತೆ ನಿರ್ಣಯಿಸಲಾಗಿದೆಃ-

ಅಂಶಃ 1 ಸಕರಾತ್ಮಕವಾಗಿ

ಅಂಶಃ 2 ಅಂತಿಮ ಆದೇಶದಂತೆ.

## ಕಾರಣಗಳು

7. ಅಂಶ 1 ಃ- ಎದುರುದಾರ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ ಃ 229/2020 ರಲ್ಲಿ ಭಾ.ದ.ಸಂ. ಕಲಂ 302 ರ ಅಡಿಯಲ್ಲಿ ದಿನಾಂಕಃ 25.09.2020 ರಂದು ವೆಂಕಟೇಶ್ ಎಂಬುವವನ ದೂರನ್ನು ಆಧರಿಸಿ ಮೊಕದ್ದಮೆ ದಾಖಲಾಗಿರುತ್ತದೆ. ದೂರಿನಲ್ಲಿ ಪ್ರಥಮ ವರ್ತಮಾನ ವರದಿಯಲ್ಲಿ ಕೃತ್ಯ ಎಸಗಿದ ಆರೋಪಿಗಳ ಯಾವುದೇ ವಿವರ ಇರುವುದಿಲ್ಲ . ಪ್ರಥಮ ವರ್ತಮಾನ ಮಾಹಿತಿಯ ಪ್ರಕಾರ ದೂರುದಾರ ಹೊಸ ಮನೆ ನಿರ್ಮಾಣ ಮಾಡಿಸುತ್ತಿದ್ದು , ದಿನಾಂಕ ಃ 25.09.2020 ರಂದು ಬೆಳಿಗ್ಗೆ ಸುಮಾರು 5-45 ಗಂಟೆಗೆ ಆ ಕಟ್ಟಡದ ಎದುರುರಸ್ತೆಯ ಪಾದಾಚಾರಿ ಜಾಗದಲ್ಲಿ ಯಾರೋ ಅಪರಿಚಿತನು ಅಂಗಾತವಾಗಿ ಮಲಗಿದ್ದು ಕಂಡುಬಂದಿದ್ದು , ಹತ್ತಿರ ಹೋಗಿ ನೋಡಲಾಗಿ ಆ ವ್ಯಕ್ತಿಯ ಎಡಕಣ್ಣಿನ ಸುತ್ತ ಕೆಂಪಾಗಿದ್ದು , ಮೂಗು, ಬಾಯಿಯಲ್ಲಿ ರಕ್ತ ಬಂದು ಹೆಪ್ಪು ಗಟ್ಟಿರುವ , ಕೈಗಳು, ಕಾಲುಗಳಿಗೆ ಹಾಗೂ ತಲೆಯ ಮೇಲೆ ರಕ್ತಗಾಯಗಳು ಆಗಿರುವುದು ಕಂಡುಬಂತು. ಆ ವ್ಯಕ್ತಿ ಮೃತಪಟ್ಟಿದ್ದು , ದೂರುದಾರ ಆರಕ್ತಕ ನಿಯಂತ್ರಣ ಕೊಠಡಿ ಕೂಡಲೇ ಕರೆಮಾಡಿ ವಿಷಯವನ್ನು ತಿಳಿಸಿದ , ನಂತರ ಸ್ವಲ್ಪ ಹೊತ್ತಿನಲ್ಲಿ ವಡ್ಡರಪಾಳ್ಯದ ಯಾವುದೋ ವ್ಯಕ್ತಿ ಬಂದು ಮೃತಪಟ್ಟಿರುವ ವ್ಯಕ್ತಿಯನ್ನು ನೋಡಿ ಅವನು ವಡ್ಡರಪಾಳ್ಯದ ಎಸ್.ಎಲ್.ವಿ ಬಾರ್ ಹತ್ತಿರ ಇರುವ ಕಣ್ಣನ್ ಎಂಬುವವನ ಮಗ ಶೇಖರ್ ಎಂಬುದಾಗಿ ಗುರುತಿಸಿದ ಪೊಲೀಸ್‌ನವರು ಸ್ಥಳಕ್ಕೆ ಬಂದು ಶವವನ್ನು ಆಸ್ಪತ್ರೆಗೆ ಕೊಂಡೊಯ್ದರು. ಮೃತನನ್ನು ಕೊಲೆಮಾಡಿರುವವನು ಪತ್ತೆ ಮಾಡಬೇಕೆಂದು ದೂರುದಾರ ದೂರಿನಲ್ಲಿ ಹೇಳಿರುತ್ತಾನೆ.

8. ಆರೋಪಿಗಳು/ ಅರ್ಜಿದಾರರು ಪ್ರಥಮ ವರ್ತಮಾನ ವರದಿ , ಬಂಧನದ ಅರ್ಜಿ ಹಾಗೂ ಆದೇಶ ಹಳೇಯ ಧೃಢೀಕೃತ ನಕಲನ್ನು ಹಾಜರು ಪಡಿಸಿದ್ದು , ಬಂಧನದ ಅರ್ಜಿಯಲ್ಲಿ ತನಿಖಾಧಿಕಾರಿಯು ಮೊಕದ್ದಮೆ ದಾಖಲಾದಮೇಲೆ ಆರೋಪಿಗಳನ್ನು ಪತ್ತೆ ಮಾಡಿ , ಆ ಸಂಬಂಧ ಬಾತ್ಮೀದಾರರ ಮಾಹಿತಿ ಮೇರೆಗೆ 1 ರಿಂದ 3ನೇ ಆರೋಪಿಗಳನ್ನು ವಶಕ್ಕೆ ಪಡೆದುಕೊಂಡು ಠಾಣೆಯಲ್ಲಿ ಹಾಜರುಪಡಿಸಿದರು. ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಲಾಯಿತು, ಆಗ ಆರೋಪಿಗಳು ತಪ್ಪನ್ನು ಒಪ್ಪಿಕೊಂಡು ಸ್ವಇಚ್ಛಾ ಹೇಳಿಕೆಯನ್ನು ನೀಡಿದರು. ನಂತರ ಕೃತ್ಯಕ್ಕೆ ಬಳಸಿದ ಅಷ್ಟು ವಸ್ತುಗಳನ್ನು ಅವರ ಮನೆಯಲ್ಲಿ ಇಟ್ಟಿರುವುದಾಗಿ ಹೇಳಿದರು ಹಾಗೂ ಪಂಚರ ಸಮಕ್ಷಮ ಪಂಚನಾಮೆ ಬರೆದು ಅಮಾನತ್ತು ಪಡಿಸಲಾಯಿತು ಎಂದು ಹೇಳಲಾಗಿರುತ್ತದೆ.

9. ಅಲ್ಲದೆ ತನಿಖಾಧಿಕಾರಿ ಈ ಪ್ರಕರಣದಲ್ಲಿ ವರದಿ ಸಲ್ಲಿಸಿ ಅದರೊಂದಿಗೆ ಮೊಕದ್ದಮಾ ದಿನಚರಿಯ ಭಾಗ 1 ರಿಂದ 6 ರ ಉದ್ರುತಗಳನ್ನು ಹಾಜರುಪಡಿಸಿದ್ದು , ಆ ಪೈಕಿ ಮೊಕದ್ದಮಾ ದಿನಚರಿ ಭಾಗ 3 ರಲ್ಲಿ ಆರೋಪಿಗಳನ್ನು ದಸ್ತಗಿರಿ ಮಾಡಿ ಪಂಚನಾಮೆ ಅಡಿಯಲ್ಲಿ ಕೃತ್ಯಕ್ಕೆ ಉಪಯೋಗಿಸಿದ ವಸ್ತುಗಳನ್ನು ಅಮಾನತ್ತು ಮಾಡಿರುವುದಾಗಿ ಹೇಳಲಾಗಿರುತ್ತದೆ. ಆದರೆ ಬಂಧನದ ಅರ್ಜಿಯಲ್ಲಿ ಆಗಲಿ ಅಥವಾ ಮೊಕದ್ದಮಾ ದಿನಚರಿಯ ಭಾಗ 3 ರಲ್ಲಾಗಲೀ ಅಮಾನತ್ತು ಪಡಿಸಿದ ವಸ್ತುಗಳ ಯಾವುದೇ ವಿವರಗಳನ್ನು ನೀಡಿರುವುದಿಲ್ಲ . ಕೇವಲ ಮೊಕದ್ದಮೆ ದಾಖಲು ಮಾಡಲಾಯಿತು, ಸಿಬ್ಬಂದಿ ನೇಮಕ ಮಾಡಲಾಗಿ ಅವರು ಬಾತ್ಮಿದಾರರ ಮಾಹಿತಿಯ ಮೇರೆಗೆ ತೃತೀಯ ಲಿಂಗಿಗಳಾದ 1 ರಿಂದ 3ನೇ ಆರೋಪಿಗಳನ್ನು ವಶಕ್ಕೆ ಪಡೆದು ಹಾಜರುಪಡಿಸಿದ್ದು , ಆರೋಪಿಗಳನ್ನು ವಿಚಾರಣೆ ಮಾಡಲಾಗಿ ಅವರು ತಪ್ಪನ್ನು ಒಪ್ಪಿಕೊಂಡರು ಎಂದು ಮಾತ್ರ ಹೇಳಲಾಗಿರುತ್ತದೆ. ನನ್ನ ಅಭಿಪ್ರಾಯದಲ್ಲಿ ಮೊಕದ್ದಮೆ ದಿನಚರಿಯಲ್ಲಿ ಅಥವಾ ಬಂಧನ ಅರ್ಜಿಯಲ್ಲಿ

ಅಥವಾ ಪ್ರಥಮ ವರ್ತಮಾನ ವರದಿಯಲ್ಲಿ ಆರೋಪಿಗಳ ವಿರುದ್ಧ ಜಾಮೀನು ನಿರಾಕರಿಸಲು ಮೊಕದ್ದಮೆಯನ್ನು ಪುಷ್ಟೀಕರಿಸುವ ಮೇಲ್ನೋಟದ ಪುರಾವೆ ಕಂಡುಬರುವುದಿಲ್ಲ . ಆರೋಪಿಗಳಿಂದ ಅಮಾನತ್ತು ಮಾಡಲಾಯಿತು ಎಂದು ಹೇಳಿರುವ ಕೃತ್ಯಕ್ಕೆ ಸಂಬಂಧಪಟ್ಟ ವಸ್ತುಗಳು ಸಹಾ ಯಾವುದೇ ವಿವರ ನೀಡಿರುವುದಿಲ್ಲ . ಹಾಗಾಗಿ ಅಸ್ಪಷ್ಟ ಮಾಹಿತಿ ಮಾತ್ರ ಅಭಿಯೋಜನೆಯ ದಾಖಲಾತಿಗಳಿಂದ ಕಂಡುಬರುತ್ತದೆ. ಭಾರತೀಯ ದಂಡ ಸಂಹಿತೆಯ ಕಲಂ. 302 ರ ಅಡಿಯಲ್ಲಿ ಆಪಾದನೆ ಮಾಡಿದ್ದರೂ ಸಹಾ ನನ್ನ ಅಭಿಪ್ರಾಯದಲ್ಲಿ ಅಭಿಯೋಜನೆ ಮೇಲ್ನೋಟದ ಮೊಕದ್ದಮೆಯನ್ನು ಅರ್ಜಿದಾರರ ವಿರುದ್ಧ ತೋರಿಸಲು ಸ್ಪಷ್ಟ ಪುರಾವೆ ಒದಗಿಸಿಲ್ಲ . ಹಾಗಾಗಿ ಅಭಿಯೋಜನೆ ಉಲ್ಲೇಖಿಸಿರುವ ಅಸ್ಪಷ್ಟ ಪುರಾವೆ ಹಿನ್ನೆಲೆಯಲ್ಲಿ ಹಾಗೂ ಯಾವುದೇ ಪ್ರತ್ಯಕ್ಷ ಸಾಕ್ಷಿ ಹಾಗೂ ಪರೋಕ್ಷ ಸಾಕ್ಷಿಗಳು ಇರುವ ಬಗ್ಗೆ ಉಲ್ಲೇಖ ಇಲ್ಲದೇ ಇರುವುದರಿಂದ ಅರ್ಜಿದಾರರು ದಿನಾಂಕಃ 26.09.2020 ರಿಂದ ಬಂಧನದಲ್ಲಿ ಇದ್ದು , ಅವನು ಮುಂದಿನ ತನಿಖೆಗೆ ಅವಶ್ಯಕತೆ ಇಲ್ಲದೇ ಇರುವುದರಿಂದ ಸೂಕ್ತ ಶರತ್ತುಗಳನ್ನು ವಿಧಿಸಿ ಜಾಮೀನು ನೀಡಬಹುದು ಎಂದು ಅಭಿಪ್ರಾಯಿಸುತ್ತೇನೆ. ತತ್ಪರಿಣಾಮವಾಗಿ ಅಂಶ 1ನ್ನು ಸಕರಾತ್ಮಕವಾಗಿ ಉತ್ತರಿಸಲಾಗಿದೆ.

10. <u>ಅಂಶ 2 ಃ</u> ಮೇಲ್ಕಂಡ ಕಾರಣಗಳಿಗಾಗಿ ಈ ಮುಂದಿನ

## ಆದೇಶ

ಅರ್ಜಿದಾರರು/1 ರಿಂದ 3 ನೇ ಆರೋಪಿಗಳು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 439 ರ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ಈ ಮೂಲಕ ಪುರಸ್ಕರಿಸಲಾಗಿದೆ. ಎದುರುದಾರ ಪೋಲಿಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆಃ 229/2020 ರಲ್ಲಿ ಭಾ.ದ.ಸಂ. ಕಲಂ 302 ರ ಅಡಿಯಲ್ಲಿ ನೋಂದಾವಣೆಯಾಗಿರುವ ಪ್ರಕರಣಕ್ಕೆ ಈ ಮೂಲಕ ಜಾಮೀನನ್ನು ಈ ಮುಂದಿನ ಶರತ್ತುಗಳಿಗೆ ಒಳಪಟ್ಟು ಪುರಸ್ಕರಿಸಿ ಜಾಮೀನು ನೀಡಲಾಗಿದೆ.

ಃ ಷರತ್ತುಗಳು ಃ

1. ಅರ್ಜಿದಾರರು ಅಭಿಯೋಜನೆಯ ಸಾಕ್ಷಿಗಳಿಗೆ ಯಾವುದೇ ರೀತಿಯ ಬೆದರಿಕೆ ಹಾಕಬಾರದು ಮತ್ತು ಸಾಕ್ಷ್ಯ ನಾಶ ಮಾಡಬಾರದು.

2. ಅರ್ಜಿದಾರರು ತನಿಖೆಗೆ ತನಿಖಾಧಿಕಾರಿಗೆ ಸಂಪೂರ್ಣ ಸಹಕಾರ ನೀಡುವುದು.

3. ಅರ್ಜಿದಾರರು ನ್ಯಾಯಾಲಯದಲ್ಲಿ ಪ್ರಕರಣ ಇದ್ದಾಗ ನ್ಯಾಯಾಲಯಕ್ಕೆ ತಪ್ಪದೇ ಸರಿಯಾಗಿ ಹಾಜರಾಗುವುದು.

4. ಅರ್ಜಿದಾರರು 11ನೇ ಎ.ಸಿ.ಎಂ.ಎಂ. ನ್ಯಾಯಾಧೀಶರ ವಿವೇಚನೆಗೆ ಸಮಾದಾನ ಆಗುವ ತಲಾ ಒಬ್ಬ ಜಾಮೀನುದಾರನನ್ನು ರೂ.1,00,000/- ಮೊತ್ತಕ್ಕೆ ಮುಚ್ಚಳಿಕೆ ಬರೆದುಕೊಡುವುದು ಹಾಗೂ ಅಷ್ಟೇ ಮೊತ್ತಕ್ಕೆ ಅರ್ಜಿದಾರರು ಪ್ರತ್ಯೇಕ ಸ್ವಂತ ಮುಚ್ಚಳಿಕೆಗಳನ್ನು ಒದಗಿಸುವುದು.

ಮೇಲ್ಕಂಡ ಶರತ್ತುಗಳನ್ನು ಪಾಲನೆ ಮಾಡುವುದಕ್ಕೆ ಒಳಪಟ್ಟು ಅರ್ಜಿದಾರನನ್ನು ಜಾಮೀನಿನಲ್ಲಿ ಬಿಡುಗಡೆ ಮಾಡಲಾಗಿದೆ.

(ತೀರ್ಪುಬರಹಗಾರನಿಗೆ ಉಕ್ತಲೇಖನ ನೀಡಲಾಗಿ ಅವರು ತರ್ಜುಮೆಮಾಡಿ ಬೆರಳಚ್ಚು ಮಾಡಿದ ಮೂಲಕ ತಿದ್ದುಪಡಿ ಮಾಡಿದ ಮೇಲೆ ಅದನ್ನು ತಿದ್ದುಪಡಿ ಮಾಡಿ ಈ ದಿನ 22ನೇ ಅಕ್ಟೋಬರ್ 2020 ರಲ್ಲಿ ತೆರೆದ ನ್ಯಾಯಾಲಯದಲ್ಲಿ ಉಚ್ಚರಿಸಲಾಯಿತು)

(ಡಿ.ಎಸ್.ವಿಜಯ ಕುಮಾರ್)
26ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.